**2 ನೇ  ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 791/2024**

ಸಿ ಡಬ್ಲ್ಯೂ 4

ಪಿ ಡಬ್ಲ್ಯೂ 2

**ಸಾಕ್ಷಿದಾರರ ಹೆಸರು** : ಚಂದ್ರಶೇಖರ ಕಡ್ಲಪ್ಪನವರ

**ತಂದೆಯ ಹೆಸರು** : ಬಸಪ್ಪ

**ವಯಸ್ಸು** : 42 ವರ್ಷ

**ಉದ್ಯೋಗ** : ಪೋಲಿಸ್ ಮುಖ್ಯ ಪೇದೆ ಗ್ರಾಮಾಂತರ ಪಿ ಎಸ್ ರಾಣೇಬೆನ್ನೂರು.

**ವಾಸ** : ರಾಣೇಬೆನ್ನೂರು. .

**ದಿನಾಂಕಃ 22-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ  ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

1. ನಾನು 2019 ರಿಂದ 2024 ರವರೆಗೆ ರಾಣೇಬೆನ್ನೂರು ನಗರ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20-03-2024 ರಂದು ಸಂಜೆ 5.30 ರ ಸುಮಾರಿಗೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನನಗೆ ಮತ್ತು ಚಾಸಾ-5 ಮತ್ತು 6 ರವರಿಗೆ ಶಂಕರ ಟಾಕೀಸ ಹತ್ತಿರ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿದ್ದು, ದಾಳಿ ಮಾಡುವ ಕಾಲಕ್ಕೆ ನಮ್ಮ ಜೊತೆಗೆ ಬನ್ನಿ ಎಂದು ಸೂಚಿಸಿರುತ್ತಾರೆ. ಚಾಸಾ-6 ರವರಿಗೆ 2 ಜನ ಪಂಚರನ್ನು ಕರೆದುಕೊಂಡು ಬರುವಂತೆ ಚಾಸಾ-1 ರವರು ತಿಳಿಸಿರುತ್ತಾರೆ. ಚಾಸಾ-6 ರವರು 2 ಜನ ಪಂಚರನ್ನು ಕರೆದುಕೊಂಡು ಬಂದು ಠಾಣೆಗೆ ಹಾಜರು ಪಡಿಸಿರುತ್ತಾರೆ. ಸದರಿ ಪಂಚರಿಗೆ ಚಾಸಾ-1 ರವರು ಬಂದ ಬಾತ್ಮಿಯ ಬಗ್ಗೆ ತಿಳಿಸಿದ್ದು ದಾಳಿಯ ಕಾಲಕ್ಕೆ ಪಂಚರಾಗಿ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ ಸಂಜೆ 6 ಗಂಟೆಯ ಸುಮಾರಿಗೆ ನನ್ನನ್ನು ಮತ್ತು ಸಿಬ್ಬಂದಿ ಹಾಗೂ ಪಂಚರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಬೈಕ್ ಮತ್ತು ಜೀಪ್ ನಲ್ಲಿ ಹೋಗಿರುತ್ತೇವೆ. ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಬೈಕ್ ಮತ್ತು ಜೀಪನ್ನು ಮರೆಯಲ್ಲಿ ನಿಲ್ಲಿಸಿ ನೋಡಲಾಗಿ ಶಂಕರ ಟಾಕೀಸ್ ಹತ್ತಿರ ರಸ್ತೆಯ ಬದಿಯಲ್ಲಿ ಒಬ್ಬ ವ್ಯಕ್ತಿ ನಿಂತು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ನಂತರ ಪಂಚರ ಸಮಕ್ಷಮ ಖಾತ್ರಿ ಪಡಿಸಿಕೊಂಡು ದಾಳಿ ಮಾಡಿದ್ದು, ಆ ವ್ಯಕ್ತಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ್ದು ನಾವೆಲ್ಲರೂ ಸೇರಿ ಆತನನ್ನು ಹಿಡಿದಿರುತ್ತೇವೆ. ಆಗ

ಸಮಯ ಸಂಜೆ 6.30 ಗಂಟೆಯಾಗಿತ್ತು.ನಂತರ ಚಾಸಾ–1 ರವರು ಆ ವ್ಯಕ್ತಿಯ ಅಂಗಶೋಧನೆ ಮಾಡಲಾಗಿ ಆತನ ಹತ್ತಿರ ಇದ್ದು ಬಿಳಿ ಬಣ್ಣದ ಚೀಲದಲ್ಲಿ 90 ಎಂ ಎಲ್ ನ 48 ಹೈ ವರ್ಡ್ಸ ಚೆಯರ್ರ ವಿಸ್ಕಿಯ ಪೌಚುಗಳು ಇದ್ದವು. ಅವುಗಳ ಬೆಲೆ ಒಂದು ಪೌಚಿಗೆ 40.01/– ಅಂತಾ ಮುದ್ರಿತವಾಗಿದ್ದವು. ಅವುಗಳ ಒಟ್ಟು ಮೊತ್ತ ರೂ.1920/– ಆಗಿರುತ್ತದೆ. ಇವೆಲ್ಲವನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡು ಆರೋಪಿ ಮುದ್ದೆ ಮಾಲುಗಳೊಂದಿಗೆ ಠಾಣೆಗೆ ಬಂದು ಚಾಸಾ–1 ರವರು ಈ ಬಗ್ಗೆ ಸರ್ಕಾರಿ ತರ್ಫಿ ನೀಡಿರುತ್ತಾರೆ. ನಾವು ದಸ್ತಗಿರಿ ಮಾಡಿದ ಆರೋಪಿ ಹೆಸರು ಜೀವರಾಜ ಭೀಮಪ್ಪ ನಾಯಕ್ , ಸಾಃ ಗಂಗಾಜಲ ತಾಂಡ ಆಗಿರುತ್ತದೆ. ಆತನನ್ನು ಮತ್ತು ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ 48 ಹೈ ವರ್ಡ್ಸ ವಿಸ್ಕಿ ಪೌಚುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ–1 ಎಂದು ಹಾಗೂ ಬಿಳಿ ಚೀಲವನ್ನು ಮು.ಮಾ–2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಎಲ್ ವಕೀಲರಿಂದಃ**

1. ಕರ್ತವ್ಯದ ಸಮಯದಲ್ಲಿ ಮೇಲಾಧಿಕಾರಿಯವರ ಆದೇಶ ಪಾಲಿಸಬೇಕು ಎಂದರೆ ಸರಿ. ಶಂಕರ ಟಾಕೀಸ್ ಜನನಿಬೀಡವಾದ ಸ್ಥಳ ಎಂದರೆ ಸರಿ. ಸದರಿ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸರಿ. ಠಾಣೆಯಿಂದ ಬಿಡುವಾಗ ಸಂಜೆ 6 ಗಂಟೆಯಾಗಿತ್ತು. ಪಂಚರ ಹೆಸರು ಗುರು ಲಮಾಣಿ ಮತ್ತು ಪೀಕಪ್ಪ ಲಮಾಣಿ ಆಗಿರುತ್ತದೆ. ಅವರನ್ನು ಚಾಸಾ–6 ರವರು ಕರೆದುಕೊಂಡು ಬಂದಿರುತ್ತಾರೆ. ಮುನ್ಸಿಪಲ್ ಗ್ರೌಂಡ್ ಗೆ ಹೋಗುವ ದಾರಿಯ ಮರೆಯಲ್ಲಿ ನಾವು ನಮ್ಮ ವಾಹನಗಳನ್ನು ನಿಲ್ಲಿಸಿದ್ದೆವು. ಎಷ್ಟು ಹೊತ್ತು ಅಲ್ಲಿ ವಾಹನ ನಿಲ್ಲಿಸಿದ್ದೆವು ಎಂದು ನನಗೆ ಈಗ ನೆನಪಿರುವುದಿಲ್ಲ. ಆರೋಪಿ ಬಿಳಿಯ ಚೀಲದಲ್ಲಿ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ನಾವು ದಾಳಿ ಮಾಡಿರುತ್ತೇವೆ. ನಾವು ದಾಳಿ ಮಾಡುವ ಕಾಲಕ್ಕೆ ಆರೋಪಿ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿ ಯನ್ನು ಹಿಡಿದಿಲ್ಲ ಎಂದರೆ ಸರಿಯಲ್ಲ. ಮು.ಮಾ–1 ಸಾಮಾನ್ಯವಾಗಿ ಎಲ್ಲಾ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾಳಿಯ ಕಾಲಕ್ಕೆ ಘಟನಾ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಘಟನೆಗೂ ಯಾವುದೆ ಸಂಬಂಧ ಇಲ್ಲದೆ ಇದ್ದರೂ ಸಹ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.